**(ಇಂದು ದಿನಾಂಕ 05-08-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು ಶಾಲೆ ಕಲಿತಿರುವುದಿಲ್ಲ. ದಾದಾಪೀರ ಗಂಜಿ ನನ್ನ ಗಂಡ ಎಂದರೆ ಸರಿ. ನನ್ನ ಮತ್ತು ದಾದಾಪೀರನ ಮದುವೆ ಆಗಿ ಎಷ್ಟು ವರ್ಷ ಆಗಿರುತ್ತದೆ ಎಂದು ಗೊತ್ತಿರುವುದಿಲ್ಲ. ನನ್ನ ಮತ್ತು ದಾದಾಪೀರನ ವೈವಾಹಿಕ ಜೀವನದಿಂದ 2 ನೇ ವಾದಿ ಮಾತ್ರ ಮಗಳು ಎಂದರೆ ಸರಿ. ದಾದಾಪೀರ 2009 ರಲ್ಲಿ 1 ನೇ ಪ್ರತಿವಾದಿಯನ್ನು ಮದುವೆ ಆಗಿರುತ್ತಾನೆ ಎಂದರೆ ಸರಿ. ದಾದಾಪೀರ ಮತ್ತು 1 ನೇ ಪ್ರತಿವಾದಿಗೆ ಪ್ರತಿವಾದಿ 2 ಮತ್ತು 3 ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ದಾದಾಪೀರನನ್ನು ಮದುವೆ ಆಗುವ ಸಮಯದಲ್ಲಿ ವಿಶ್ವಚೇತನ ಇಂಗ್ಲಿಷ್ ಮಾದ್ಯಮದಲ್ಲಿ ಶಾಲೆಯಲ್ಲಿ ಮತ್ತು ಸಿಂಗನಹಳ್ಳಿ ಗ್ರಾಮದ ರಾಘವೇಂದ್ರ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆ ಕಾರಣ ಆಕೆಗೆ ಚೆನ್ನಾಗಿ ಸಂಬಂಳ ಇತ್ತು ಎಂದರೆ ಸರಿ. ನನ್ನ ಗಂಡನಿಗೆ 1 ಜೇಸಿಬಿ ಮತ್ತು 2 ಟ್ರ್ಯಾಕ್ಟರ ಇದ್ದವು. ಜೇಸಿಬಿ ಯನ್ನು ಶ್ರೀರಾಮ ಪೈನಾನ್ಸ ಸಾಲ ಮಾಡಿ ಖರೀದಿಸಿದ್ದರು ಎಂದರೆ ಸರಿ. ಸಾಲ ಮರುಪಾವತಿ ಮಾಡದೆ ಇದ್ದಾಗ ಪೈನಾನ್ಸರವರು ವಾಹನವನ್ನು ಜಪ್ತು ಮಾಡಿದ್ದರು ಎಂದರೆ ಸರಿ. ವಾಹನ ಖರೀದಿ ಇಂದ ಸಾಲವಾಗಿತ್ತು ಎಂದರೆ ಸರಿಯಲ್ಲ. ನನ್ನ ಗಂಡ ಸದರಿ ವಾಹನಗಳನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿ. ನಮ್ಮ ಮನೆತನದ ಸಾಲದ ಮರುಪಾವತಿಗಾಗಿ ಸದರಿ ವಾಹನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೈನಾನ್ಸ ಇಂದ ಸಾಲ ಮರುಪಾವತಿ ಮಾಡಬೇಕು ಎಂದು ನೋಟಿಸ್ ಬಂದಿದ್ದವು ಎಂದರೆ ಸರಿ. ದಾವಾ ಅನಸೂಚಿ ಎ ಅನುಕ್ರಮ ಸಂ.1 ರ ಆಸ್ತಿ ಪೂರ್ವಜರ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಸದರಿ ಆಸ್ತಿಯು ನನ್ನ ಗಂಡ ಖರೀದಿಸಿದ ಆಸ್ತಿ ಎನ್ನುತ್ತಾರೆ. ನಾನು ಒಂದು ಮನೆಯಲ್ಲಿ ಮತ್ತು 1 ನೇ ಪ್ರತಿವಾದಿ ಮತ್ತೊಂದು ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದೇವು ಎಂದರೆ ಸರಿ. 1 ನೇ

ಪ್ರತಿವಾದಿ ಬಿ ಎಡ್ ಶಾಲೆ ಕಲಿತಿರುತ್ತಾರೆ ಎಂದರೆ ಸರಿ. ಮಿಶ್ರಿಕೋಟಿಯಲ್ಲಿ 1 ನೇ ಪ್ರತಿವಾದಿ ಮತ್ತು ಇತರರು ಸೇರಿ ಶಾಲೆ ನಡೆಸುತ್ತಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬೆಲೂರಿನಿಂದ ಮಿಶ್ರಿಕೋಟಿಗೆ ಹೋಗಿ ಬರುವುದು ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿ ಮಿಶ್ರಿಕೋಟಿ ಶಾಲೆಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. 1 ನೇ ಪ್ರತಿವದಿ ಈಗ ಹೈಕೊರ್ಟನಲ್ಲಿ ಟೈಪಿಸ್ಟ ನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಆದಾಯವನ್ನು ತಾನೆ ಇಟ್ಟುಕೊಳ್ಳುತ್ತಿದ್ದಳು ಎಂದರೆ ನನಗೆ ಗೊತ್ತಿರುವುದಿಲ್ಲ. 2020 ರಲ್ಲಿ 1 ನೇ ಪ್ರತಿವಾದಿ ತನ್ನ ಆದಾಯದಿಂದ ಹೇಗ್ಗೇರಿಯಲ್ಲಿ ದಾವಾ ಆಸ್ತಿ ಅನುಸೂಚಿ ಬಿ 2 ಆಸ್ತಿಯನ್ನು ರೂ.3 ಲಕ್ಷ ನೀಡಿ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಅನುಸೂಚಿ ಬಿ ಆಸ್ತಿಯು ಪಾತಿಮಾ ಬಾಶಾಸಾಬ ಕೊಣ್ಣೂರ ರವರ ಆಸ್ತಿ ಎಂದರೆ ಸರಿ. 2013 ರಲ್ಲಿ 1 ನೇ ಪ್ರತಿವಾದಿ ತನ್ನ ಆದಾಯದಿಂದ ಬೇಲೂರ ದಾವಾ ಆಸ್ತಿ ಅನುಸೂಚಿ ಬಿ 1 ಆಸ್ತಿಯನ್ನು ರೂ.1,50,000 ಕ್ಕೆ ಖರೀದಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗೆ 1 ನೇ ಪ್ರತಿವಾದಿ ಹೆಸರಿನಲ್ಲಿ ನಿರಂತರ ಬಾಡಿಗೆ ಪತ್ರ ಮಾಡಿ ಆಕೆ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಅವತ್ತಿನಿಂದ 1 ನೇ ಪ್ರತಿವಾದಿ ಅಲ್ಲಿ ತಗಡಿನ ಶೇಡ್ ಹಾಕಿ ಅಲ್ಲಿಯೇ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ 2013 ರಿಂದ ಅದೇ ಮನೆಯಲ್ಲಿ ವಾಸವಾಗಿರುತ್ತಾಳೆ ಎಂದರೆ ಸರಿ. ಹೇಗ್ಗೇರಿಯಲ್ಲಿರುವ ಮನೆ 1 ನೇ ಪ್ರತಿವಾದಿ ಹೆಸರಿನಲ್ಲಿ ನೋಂದಾವಣಿ ಖರೀದಿ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಕೊಟೂರಿನ ಮನೆಯಲ್ಲಿ ವಾಸವಾಗಿರುತ್ತೇನೆ. ಕೊಟೂರಿನಲ್ಲಿರುವ ನಮ್ಮ ಮನೆಯ ಸಂ.268/3 ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿ ದಾದಾಪೀರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿ. ದಾವಾ ಅನೂಸೂಚಿ ಬಿ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಸಂಪಾದನೆ ಆಸ್ತಿಗಳು ಎಂದರೆ ಸರಿಯಲ್ಲ. ಪ್ರತಿವಾದಿಯರು ನಮ್ಮ ವಿರುದ್ದ OS No.817/2003 ದಾವಾ ದಾಖಲಿಸಿರುತ್ತಾರೆ ಎಂದರೆ ಸರಿ. ನನ್ನ ಗಂಡ ತೀರಿಕೊಂಡ ನಂತರ ದಾವಾ ಅನೂಸೂಚಿ ಎ ಆಸ್ತಿಗೆ ನಮ್ಮ ಹೆಸರು ದಾಖಲಿಸಿಕೊಳ್ಳಲು ಅರ್ಜಿ ನೀಡಿದ್ದೇವು ಎಂದರೆ

ಸರಿ. ಸದರಿ ನಮ್ಮ ಅರ್ಜಿಗೆ ಕಂದಾಯ ಇಲಾಖೆಯವರು ದಾದಾಪೀರಗೆ ಇಬ್ಬರೂ ಹೆಂಡತಿಯರು ಇರುತ್ತಾರೆ ನ್ಯಾಯಾಲಯದಿಂದ ಆದೇಶ ಪಡೆದುಕೊಂಡು ಬನ್ನಿ ಎಂದು ಹೇಳಿರುತ್ತಾರೆ ಎಂದರೆ ಸರಿ. ಆ ಕಾರಣಕ್ಕಾಗಿ 1 ನೇ ಪ್ರತಿವಾದಿ ನನ್ನ ವಿರುದ್ಧ ದಾವಾ ದಾಖಲಿಸಿರುತ್ತಾರೆ ಎಂದರೆ ಸರಿ. ದಾದಾಪೀರ ಅಪಘಾತದಲ್ಲಿ ತೀರಿಕೊಂಡಿರುತ್ತಾನೆ. 1 ನೇ ಪ್ರತಿವಾದಿ ನನ್ನ ಗಂಡನಿಗೆ ಹಣಕಾಸಿನ ಸಹಾಯ ಮಾಡುತ್ತಿದ್ದಳು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾದಾಪೀರಗೆ ಬ್ಯಾಂಕ ಸಾಲ ಮರುಪಾವತಿಗೆ ಹಣಕಾಸಿನ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ ಆಸ್ತಿಗಳು 1 ನೇ ಪ್ರತಿವಾದಿ ಸ್ವಅರ್ಜಿತ ಆಸ್ತಿ ಆಗಿದ್ದರೂ ಕೂಡಾ ಅವುಗಳಲ್ಲಿ ಪಾಲು ಪಡೆಯಲು ಅವು ಒಟ್ಟು ಕುಟುಂಬದ ಆಸ್ತಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಬಿ ಆಸ್ತಿಗಳಿಗೆ ನಮಗೆ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಎ ಆಸ್ತಿಯಲ್ಲಿ ಮತ್ತು ಕೊಟೂರಿನ ಆಸ್ತಿಯಲ್ಲಿ ಮಾತ್ರ ನಮಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಟ್ಟು ದಾವಾ ಅನುಸೂಚಿ ಬಿ ಆಸ್ತಿಗಳಲ್ಲಿ ಪಾಲು ಪಡೆಯಲು ಸುಳ್ಳು ದಾವೆ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ, ಧಾರವಾಡ.